


## ರಾಜಕುಮಾರ ಕುಲಕರ್ಣಿ

ಕಲೆ: ಡಿ.ಕೆ. ರಮೇಶ್

ಪ್ರೇಮಚಂದನಿಗೆ ಅವನು ಕೆಲಸ ಮಾಡುತ್ತಿದ್ದ ಕಂಪನಿಯ ಮುಖ್ಯಕಚೇರಿಯಿಂದ ಬಂದ ಪತ್ರದ ಒಕ್ಕಣೆ ಹೀಗಿತ್ತು – 'ಕಂಪನಿಯ ಆಡಳಿತ ಮಂಡಳಿಯಲ್ಲಿ ಸಾಕಷ್ಟು ಬದಲಾವಣೆಗಳಾಗಿವೆ. ಹೊಸ ಆಡಳಿತ ಮಂಡಳಿಯು ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಯ ವಿಶ್ವಾಸಾರ್ಹತೆಯನ್ನು ಪರಿಶೀಲಿಸಲು ಬಯಸಿದೆ. ಕಂಪನಿಯ ನಿಯಮಗಳು ಮತ್ತು ಸಿಬ್ಬಂದಿಯ ವ್ಯಕ್ತಿತ್ವ ಹಾಗೂ ಮುಖಚಹರೆಯ ನಡುವಣ ಹೊಂದಾಣಿಕೆಯನ್ನು ಗುರುತಿಸುವುದೇ ಈ ಪರಿಶೀಲನೆಯ ಉದ್ದೇಶವಾಗಿದೆ. ಉಲ್ಲೇಖಿಸಿದ ದಿನಾಂಕದಂದು ತಾವು ಮುಖ್ಯಕಚೇರಿಯಲ್ಲಿ ಚಹರೆ ಪರಿಶೀಲನಾ ಸಂದರ್ಶನಕ್ಕೆ ಹಾಜರಾಗುವಂತೆ ಸೂಚಿಸಲಾಗಿದೆ. ಆಡಳಿತ ಮಂಡಳಿಯ ನೀತಿನಿಯಮಗಳಿಗೆ ಅನುಗುಣವಾದ ಮುಖಚಹರೆ ತಮ್ಮದಾಗಿದ್ದಲ್ಲಿ ತಮ್ಮನ್ನು ಕೆಲಸದಲ್ಲಿ ಮುಂದುವರೆಸಲಾಗುವುದು. ಒಂದುವೇಳೆ ತಮ್ಮ ಮುಖಚಹರೆ ಆಡಳಿತ ಮಂಡಳಿ ಇಚ್ಛೆಗೆ ವಿರುದ್ಧವಾಗಿದ್ದಲ್ಲಿ ತಮ್ಮನ್ನು ಮುಂದುವರೆಸುವ ಇಲ್ಲವೇ ಕೆಲಸದಿಂದ ವಜಾಗೊಳಿಸುವ ನಿರ್ಧಾರ ಕಂಪನಿಗೆ ಸೇರಿದ್ದು. ಪತ್ರದಲ್ಲಿ ಉಲ್ಲೇಖಿಸಿದ ದಿನದಂದು ತಾವು ಸಂದರ್ಶನಕ್ಕೆ ಹಾಜರಾಗದಿದ್ದ ಪಕ್ಷದಲ್ಲಿ ತಮ್ಮ ಗೈರುಹಾಜರಿಯನ್ನು ಅಸಮ್ಮತಿಯೆಂದು ಪರಿಗಣಿಸಿ ತಮ್ಮನ್ನು ಕೆಲಸದಿಂದ ವಜಾಗೊಳಿಸುವ ಹಕ್ಕು ಆಡಳಿತ ಮಂಡಳಿಗಿದೆ'.

ಪತ್ರವನ್ನೋದಿ ಪ್ರೇಮಚಂದನಿಗೆ ಒಂದುಕ್ಷಣ ಕಣ್ಣಿಗೆ ಕತ್ತಲಾವರಿಸಿದಂತಾಗಿ, ತಾನು ಯಾವುದೋ ಒಂದು ಷಡ್ಯಂತ್ರದಲ್ಲಿ ಸಿಕ್ಕಿಬಿದ್ದ ವಿಚಿತ್ರ ಅನುಭವವಾಗಿ, ಹೊಟ್ಟೆ ತೊಳಸಿದಂತೆನಿಸಿ ಎದ್ದು ವಾಶ್‌ರೂಮಿನತ್ತ ಹೆಜ್ಜೆ ಹಾಕಿದ. ತೂಗುಹಾಕಿದ್ದ ಕನ್ನಡಿಯಲ್ಲಿ ತನ್ನ ಮುಖವನ್ನು ದಿಟ್ಟಿಸಿ ನೋಡುತ್ತ ನಿಂತವನಿಗೆ ಕೆಲವು ದಿನಗಳ ಹಿಂದಷ್ಟೆ ಹೆಂಡತಿ ಆಡಿದ ಮಾತುಗಳು ತಲೆಯಲ್ಲಿ ಗಿರಿಗಿಟ್ಲೆ ಆಡಲಾರಂಭಿಸಿದವು. ಅಂದು ಊಟ ಬಡಿಸುವಾಗ ಸರಳಾಬಾಯಿ ತನ್ನ ಮನದ ಬೇಗುದಿಯನ್ನು ಸಿಟ್ಟಿನಿಂದಲೇ ಹೊರಹಾಕಿದ್ದಳು, 'ನಿಮ್ಮ ಮಾರಿ ಮ್ಯಾಲಿನ ಕಳ್ಯಾಕ ಈಗಿದ್ದ ನೌಕರಿ ಸಿಕ್ಕಿದ್ದೆ ದೊಡ್ಡ ಪುಣ್ಯ. ಪಕ್ಕದ ಮನಿ ಮಾಧುರಿ ಹೇಳ್ಲಿಕತ್ತಿದ್ದಳು ಹೊಸ ಆಡಳಿತ ಮಂಡಳಿ ಬರೊದದಾ. ಹಾಗೇನಾದ್ರೂ ಬಂದ್ರ ಈಗಿದ್ದ ಎಷ್ಟೋ ಮಂದಿ ನೌಕರಿ ಕಳ್ಕೊತಾರಂತ. ಯಾಕಂದ್ರ, ಹೊಸ ಆಡಳಿತ